ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತು
*Karnataka School Quality Assessment & Accreditation Council*
ಕೆ.ಎಸ್.ಇ.ಎ.ಬಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–03, ದೂರವಾಣಿ ಸಂಖ್ಯೆ:080–23341615, 23562283
e-mail: ksqaacbangalore@gmail.com, ksqaacbengaluru@gmail.com

ಸಂಖ್ಯೆ:ಕೆ4/ ಕೆ.ಎಸ್.ಕ್ಯೂ.ಎ.ಎ.ಸಿ/Ups & Batteries AMC/ನೀಡುವ ಬಗ್ಗೆ 67/2022–23 ದಿನಾಂಕ: 01.08.2023

**ದರಪಟ್ಟಿ ಆಹ್ವಾನ ಪತ್ರ**

ವಿಷಯ: ಕೆ.ಎಸ್.ಕ್ಯೂ.ಎ.ಎ.ಸಿ ಯಲ್ಲಿರುವ ಯು.ಪಿ.ಎಸ್. ಮತ್ತು ಬ್ಯಾಟರಿಗಳ ಒಂದು ವರ್ಷದ ವಾರ್ಷಿಕ ನಿರ್ವಹಣೆ ಕಾರ್ಯಕ್ಕಾಗಿ ಅರ್ಹ ಸಂಸ್ಥೆಗಳಿಂದ ದರಪಟ್ಟಿ ಆಹ್ವಾನಿಸುವ ಬಗ್ಗೆ.

******

ಕೆ.ಎಸ್.ಕ್ಯೂ.ಎ.ಎ.ಸಿಯಲ್ಲಿರುವ ಯು.ಪಿ.ಎಸ್. ಮತ್ತು ಬ್ಯಾಟರಿಗಳ ಒಂದು ವರ್ಷದ ವಾರ್ಷಿಕ ನಿರ್ವಹಣೆ ಕಾರ್ಯಕ್ಕಾಗಿ ದರಪಟ್ಟಿಯನ್ನು ಆಹ್ವಾನಿಸಲಾಗಿದೆ. ದರಪಟ್ಟಿಯನ್ನು ಸಲ್ಲಿಸಲು ಇಚ್ಛಿಸುವ ಅಧಿಕೃತ ಸಂಸ್ಥೆಗಳು ತಮ್ಮ ದರಗಳನ್ನು ಸಲ್ಲಿಸಲು ಕೋರಿದೆ. ವಾರ್ಷಿಕ ನಿರ್ವಹಣೆಗೆ ಒಳಪಡುವ ಸಾಮಗ್ರಿಗಳ ವಿವರ ಈ ಕೆಳಕಂಡಂತಿರುತ್ತವೆ. ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು, ಅರ್ಹ ಸಂಸ್ಥೆಗಳಿಂದ ದರಪಟ್ಟಿಯನ್ನು ಆಹ್ವಾನಿಸಲಾಗಿದೆ.

| Details of U.P.S & it's capacity | | | | Amount in Rs) AMC cost per month (Including all applicable taxes) |
|---|---|---|---|---|
| Sl. No | Details of U.P.S | No Of U.P.S | No. of battery | |
| 1. | 10 KVA UPS | 01 | 20 | |

**ಷರತ್ತುಗಳು**

1. ಅನುಮೋದನೆಯಾದ ದರವು ಕರಾರು ಒಪ್ಪಂದದ ದಿನಾಂಕದಿಂದ ಒಂದು ವರ್ಷದವರೆಗೆ ಚಾಲ್ತಿಯಲ್ಲಿರುತ್ತದೆ.
2. ನಮೂದಿಸಿದ ಒಟ್ಟು ದರದಲ್ಲಿ ಅತಿ ಕಡಿಮೆ ದರ ನಮೂದಿಸಿದ ಸಂಸ್ಥೆಯನ್ನು ಸದರಿ ಕಾರ್ಯಕ್ಕೆ ಆಯ್ಕೆ ಮಾಡಲಾಗುವುದು.
3. ದರಪಟ್ಟಿಯಲ್ಲಿ ನಮೂದಿಸಿರುವ ದರವೇ ಅಂತಿಮವಾಗಿದ್ದು, ನಂತರದಲ್ಲಿ ಹೆಚ್ಚುವರಿ ಬಿಲ್ ಸಲ್ಲಿಸಲು ಅವಕಾಶವಿರುವುದಿಲ್ಲ.
4. ಯು.ಪಿ.ಎಸ್.ಗಳ ದುರಸ್ಥಿಗೆ ಅಗತ್ಯವಾದ ಬಿಡಿಭಾಗಗಳನ್ನು ಅನುಮೋದಿತ ಸಂಸ್ಥೆಯೇ ಬದಲಾಯಿಸಬೇಕು ಹಾಗೂ ಈ ವೆಚ್ಚಗಳನ್ನು ಕೆ.ಎಸ್.ಕ್ಯೂ.ಎ.ಎ.ಸಿಯು ಭರಿಸುವುದಿಲ್ಲ.
5. ಯು.ಪಿ.ಎಸ್. ಮತ್ತು ಬ್ಯಾಟರಿಗಳ ನಿರ್ವಹಣೆಗೆ ಸಂಬಂಧಿಸಿದಂತೆ ತಾಂತ್ರಿಕ ತೊಂದರೆ ಅಥವಾ ದುರಸ್ಥಿ ಉಂಟಾದಲ್ಲಿ ಕೆ.ಎಸ್.ಕ್ಯೂ.ಎ.ಎ.ಸಿ ಯು ಮೌಖಿಕವಾಗಿ ಅಥವಾ ದೂರವಾಣಿ ಮೂಲಕ ತಿಳಿಸಿದ ಕೂಡಲೇ ಎರಡು ಗಂಟೆಗಳೊಳಗೆ ಸರಿಪಡಿಸಲು ಕ್ರಮಕೈಗೊಳ್ಳಬೇಕು. ಎರಡು ದಿನಗಳ ನಂತರದ ವಿಳಂಬಕ್ಕೆ ಪ್ರತಿದಿನಕ್ಕೆ ಪ್ರತಿ ಯು.ಪಿ.ಎಸ್.ಗೆ ರೂ.200/– ದಂಡ ವಿಧಿಸಲಾಗುವುದು.
6. ಸದರಿ ನಿರ್ವಹಣಾ ಕಾರ್ಯಗಳಿಗೆ ಯಾವುದೇ ಮುಂಗಡ ಹಣ ನೀಡುವುದಿಲ್ಲ.
7. ಕೆ.ಎಸ್.ಕ್ಯೂ.ಎ.ಎ.ಸಿ ಯಲ್ಲಿರುವ ಯು.ಪಿ.ಎಸ್. ಮತ್ತು ಅದಕ್ಕೆ ಸಂಬಂಧಿಸಿದ ಯಂತ್ರಗಳನ್ನು 03 ತಿಂಗಳಿಗೊಮ್ಮೆ ಸಮಗ್ರವಾಗಿ ಪರಿಶೀಲಿಸಿ ಮುನ್ನೆಚ್ಚರಿಕೆ ನಿರ್ವಹಣೆ (Preventive maintenance) ಯನ್ನು ಮಾಡಬೇಕು.
8. ಯು.ಪಿ.ಎಸ್. ಬ್ಯಾಟರಿಗಳ ಟರ್ಮಿನಲ್ಸ್‌ಗಳನ್ನು ಪ್ರತಿ ಮಾಹೆ ಸ್ವಚ್ಛಗೊಳಿಸಬೇಕು ಹಾಗೂ ಬ್ಯಾಟರಿಯಲ್ಲಿನ ಡಿಸ್ಟಿಲ್ ವಾಟರ್‌ನ್ನು ಪ್ರತಿ ಮಾಹೆ ಪರಿಶೀಲಿಸಬೇಕು.
9. ಕೆ.ಎಸ್.ಕ್ಯೂ.ಎ.ಎ.ಸಿಯಲ್ಲಿ ಪರೀಕ್ಷಾ ಕಾರ್ಯವು ಅತಿ ತುರ್ತಾಗಿರುವುದರಿಂದ ಕಛೇರಿ ಅವಧಿ, ರಜಾ ದಿನಗಳಲ್ಲಿ ಕೆ.ಎಸ್.ಕ್ಯೂ.ಎ.ಎ.ಸಿಯ ಕಾರ್ಯ ನಿರ್ವಹಿಸಲು ಸಿದ್ದರಿರಬೇಕು.
10. ಯು.ಪಿಎಸ್. ಯಂತ್ರಗಳು ದುರಸ್ಥಿಗೆ ಬಂದಲ್ಲಿ ಕೆ.ಎಸ್.ಕ್ಯೂ.ಎ.ಎ.ಸಿಯಿಂದ ಅನುಮತಿ ಪಡೆದು ಒಳಗೆ, ಹೊರಗೆ ಸಾಗಾಣಿಕೆ ಮಾಡಬೇಕಾದ ಸಂದರ್ಭದಲ್ಲಿ ಸಾಗಾಣಿಕೆ ವೆಚ್ಚವನ್ನು ಸದರಿ ಸಂಸ್ಥೆಯವರೇ ಭರಿಸಬೇಕಾಗುತ್ತದೆ.
11. ಯು.ಪಿ.ಎಸ್. ಮತ್ತು ಬ್ಯಾಟರಿಗಳು ದುರಸ್ತಿಗೆ ಬಂದಲ್ಲಿ ಸದರಿ ಯಂತ್ರಗಳು ದುರಸ್ಥಿಯಾಗುವವರೆಗೂ ತಮ್ಮ ಸಂಸ್ಥೆಯ ವತಿಯಿಂದ ಬದಲಿ ಯಂತ್ರಗಳ (Stand by) ವ್ಯವಸ್ಥೆ ಮಾಡಬೇಕಾಗುವುದು.
12. ನಿರ್ವಹಣಾ ವೆಚ್ಚವನ್ನು ತ್ರೈಮಾಸಿಕವಾಗಿ ಪಾವತಿಸಲಾಗುವುದು. ಸದರಿ ಪಾವತಿಯಲ್ಲಿ ಆದಾಯ ತೆರಿಗೆಯನ್ನು ಕಟಾಯಿಸಲಾಗುವುದು.
13. ಕೆ.ಎಸ್.ಕ್ಯೂ.ಎ.ಎ.ಸಿಯು ವಹಿಸಿದ ಸದರಿ ಕಾರ್ಯವನ್ನು ಬೇರೆ ಸಂಸ್ಥೆಗಳಿಗೆ ವರ್ಗಾಯಿಸುವಂತಿಲ್ಲ.
14. ದರಪಟ್ಟಿಯಲ್ಲಿ ಒಪ್ಪಿಗೆಯಾದ ಸಂಸ್ಥೆಯು ಭದ್ರತಾ ಠೇವಣಿಯನ್ನು ಕಾರ್ಯನಿರ್ವಾಹಕ ನಿರ್ದೇಶಕರು, ಕೆ.ಎಸ್.ಕ್ಯೂ.ಎ.ಎ.ಸಿ, ಕೆ.ಎಸ್.ಇ.ಎ.ಬಿ ರವರ ಹೆಸರಿಗೆ ಬ್ಯಾಂಕ್ ಹುಂಡಿಯನ್ನು ಕೆ.ಎಸ್.ಕ್ಯೂ.ಎ.ಎ.ಸಿಯೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳುವಾಗ ನೀಡುವುದು.
15. ದರಪಟ್ಟಿಯಲ್ಲಿ ಒಪ್ಪಿಗೆಯಾದ ಸಂಸ್ಥೆಯು ರೂ.200/–ಗಳ ಛಾಪಾ ಕಾಗದದಲ್ಲಿ ಕೆ.ಎಸ್.ಕ್ಯೂ.ಎ.ಎ.ಸಿಯೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳಬೇಕಾಗುತ್ತದೆ.
16. ಈ ವ್ಯವಹಾರದಲ್ಲಿ ಯಾವುದೇ ವ್ಯಾಜ್ಯಗಳು ಉದ್ಭವಿಸಿದಲ್ಲಿ ತಮ್ಮ ಸ್ವಂತ ಖರ್ಚಿನಲ್ಲಿಯೇ ಬಗೆಹರಿಸಿಕೊಳ್ಳತಕ್ಕದ್ದು ಹಾಗೂ ನ್ಯಾಯಾಲಯದ ಪ್ರಕರಣಗಳು ಉದ್ಭವಿಸಿದಲ್ಲಿ ನ್ಯಾಯಾಲಯದ ಮಿತಿಯು ಬೆಂಗಳೂರು ನಗರಕ್ಕೆ ಮಾತ್ರ ಸೀಮಿತವಾಗಿರುತ್ತದೆ.

ಈ ಮೇಲ್ಕಂಡ ಷರತ್ತುಗಳಿಗೆ ಒಳಪಟ್ಟು ಕೊಟೇಷನ್ ಸಲ್ಲಿಸಲು ಇಚ್ಛಿಸುವವರು **ದಿನಾಂಕ:19.08.2023**ರೊಳಗೆ ಸೀಲು ಮಾಡಿದ ಲಕೋಟೆಯಲ್ಲಿ **"ಕಾರ್ಯನಿರ್ವಾಹಕ ನಿರ್ದೇಶಕರು, ಕೆ.ಎಸ್.ಕ್ಯೂ.ಎ.ಎ.ಸಿ, ಕೆ.ಎಸ್.ಇ.ಎ.ಬಿ, ಮಲ್ಲೇಶ್ವರಂ, ಬೆಂಗಳೂರು,** ಇವರಿಗೆ ಖುದ್ದಾಗಿ ಅಥವಾ ಅಂಚೆಯ ಮೂಲಕ ಸಲ್ಲಿಸಲು ತಿಳಿಸಲಾಗಿದೆ. ಹಾಗೂ ಲಕೋಟೆಯ ಮೇಲೆ **"ಯು.ಪಿ.ಎಸ್. ಮತ್ತು ಬ್ಯಾಟರಿಗಳ ಒಂದು ವರ್ಷದ ವಾರ್ಷಿಕ ನಿರ್ವಹಣೆ ಕಾರ್ಯಕ್ಕೆ ದರಪಟ್ಟಿ"** ಎಂದು ನಮೂದಿಸುವುದು. ಹೆಚ್ಚಿನ ಮಾಹಿತಿಯನ್ನು ಕೆ.ಎಸ್.ಕ್ಯೂ.ಎ.ಎ.ಸಿ ಕಛೇರಿ ವತಿಯಿಂದ ಪಡೆಯಬಹುದಾಗಿದೆ.

ಕಾರ್ಯನಿರ್ವಾಹಕ ನಿರ್ದೇಶಕರು.

**ಪ್ರತಿಗಳು**

1. ಕೆ.ಎಸ್.ಕ್ಯೂ.ಎ.ಎ.ಸಿಯ ಸೂಚನಾ ಫಲಕಕ್ಕೆ
2. ಕಛೇರಿ ಪ್ರತಿ.